ಕರ್ನಾಟಕ ಕೈಮಗ್ಗ ನಿಗಮದವರು ಹೊರ ರಾಜ್ಯಗಳಿಂದ ಖರೀದಿಸಿದ ಬಟ್ಟೆಗಳು

2963 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಮಗ್ಗ ನಿಗಮದವರು ಹೊರ ರಾಜ್ಯಗಳ ವಿವಿಧ ಸೊಸೈಟಿಗಳ ಮೂಲಕ ಹಾಗೂ ಖಾಸಗಿ ಸಂಸ್ಥೆಗಳಿಂದ ಖರೀದಿಸಿದ ಬಟ್ಟೆಗಳ ಮೌಲ್ಯ ಎಷ್ಟು? (ಐದು ವರ್ಷಗಳ ವಿವರ ನೀಡುವುದು)

ಆ) ಹೊರ ರಾಜ್ಯಗಳಿಂದ ಇಷ್ಟೇ ಪ್ರಮಾಣದ ಬಟ್ಟೆಗಳನ್ನು ಒಂದು ಮಿತಿಗೊಳಪಟ್ಟು ಖರೀದಿಸಬೇಕೆಂಬ ನಿಯಮಗಳನ್ನು ನಿಗಮವು ಪಾಲಿಸಿದೆಯೇ? ಇಲ್ಲವಾದಲ್ಲಿ ಕಾರಣಗಳೇನು?

ಇ) ರಾಜ್ಯದಲ್ಲಿನ ನೇಕಾರರು ವೃತ್ತಿ ಆಶ್ರಯವಿಲ್ಲದೆ ಇರುವಾಗ ಹೊರ ರಾಜ್ಯಗಳಿಂದ ಬಟ್ಟೆಗಳನ್ನು ಖರೀದಿ ಮಾಡಿ ನಿಗಮವು ಮಾರಾಟ ಮಾಡುವ ಉದ್ದೇಶವು ನಿಗಮ ಸ್ಥಾಪನೆಯ ಮೂಲ ಉದ್ದೇಶಕ್ಕೆ ಚ್ಯುತಿ ತರುವುದಿಲ್ಲವೇ? ಹೌದಾದಲ್ಲಿ ಆ ಕುರಿತು ಸರ್ಕಾರದ ಚಿಂತನೆಗಳೇನು?

ಈ) ರಾಜ್ಯದಲ್ಲಿ ನಶಿಸುತ್ತಿರುವ ನೇಕಾರರಿಗೆ ಆಶ್ರಯವಾಗಬೇಕಾದ ನಿಗಮವು ನೇಕಾರರ ಹೆಸರಿನಲ್ಲಿ ದೊಡ್ಡ ಮೊತ್ತದ ಹಣವನ್ನು ವ್ಯಯ ಮಾಡುವುದನ್ನು ತಪ್ಪಿಸಿ ನೇಕಾರರಿಗೆ ಅದರ ನೇರ ಪ್ರಯೋಜನ ದೊರೆಯುವಂತೆ ಮಾಡುವ ಯೋಜನೆಗಳೇನಾದರೂ ಸರ್ಕಾರದ ಮುಂದಿದೆಯೇ?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು) :

ಅ) ಹೊರ ರಾಜ್ಯಗಳ ಸಹಕಾರಿ ಸಂಘಗಳು, ಶೃಂಗ ಸಂಸ್ಥೆಗಳು ಹಾಗೂ ಕೈಮಗ್ಗ ಅಭಿವೃದ್ಧಿ ನಿಗಮಗಳ ಮೂಲಕ ಕಳೆದ ಐದು ವರ್ಷಗಳಿಂದ ನಿಗಮವು ಖರೀಸಿದ ಬಟ್ಟೆ ಮೌಲ್ಯ ಹೀಗಿದೆ.

ವರ್ಷ	ಮೌಲ್ಯ (ಲಕ್ಷ ರೂ.ಗಳಲ್ಲಿ)
1993-94	92.07
1994-95	97.90
1995-96	35.04
1996-97	4.15
1997-98 (ಜುಲೈ 97ರವರೆಗೆ)	0.71

ಆ) ನಿಯಮಾವಳಿಗಳನ್ನು ಪಾಲಿಸಲಾಗಿದೆ.

ಇ) ಸಾಮಾನ್ಯವಾಗಿ ರಾಜ್ಯದೊಳಗಿನ ನೇಕಾರರು ಉತ್ಪಾದನೆ ಮಾಡಿರತಕ್ಕಂಥ ನಮೂನೆ ಬಟ್ಟೆಗಳನ್ನು ಬಹಳ ಕಡಿಮೆ ಮಿತಿಯಲ್ಲಿ ಹೊರ ರಾಜ್ಯಗಳ ಸಹಕಾರಿ ಸಂಘಗಳು, ಶೃಂಗ ಸಂಸ್ಥೆಗಳು

ಇಲ್ಲವೇ ಕೈಮಗ್ಗ ಅಭಿವೃದ್ಧಿ ನಿಗಮಗಳಿಂದ ಅದರಲ್ಲೂ ಹೆಚ್ಚಿನ ಪಾಲನ್ನು ಬಾರ್ಟರ್ ಆಧಾರದ ಮೇಲೆ ಖರೀದಿಸುತ್ತಿದ್ದು, ಇದರ ಉದ್ದೇಶ ಮಾರಾಟ ಮಳಿಗೆಗಳಲ್ಲಿ ಗ್ರಾಹಕರಿಗೆ ಎಲ್ಲಾ ವಿಧವಾದ ಬಟ್ಟೆಗಳನ್ನು ಲಭ್ಯಮಾಡಿಕೊಡುವುದು ಮತ್ತು ಇದರಿಂದ ಮಾರಾಟ ಹೆಚ್ಚಿಸುವುದು, ನಿಗಮವು ತಾನು ಅಳವಡಿಸಿಕೊಂಡಿರುವ ನೇಕಾರರಿಗೆ ಪೂರ್ಣ ಪ್ರಮಾಣದ ಕೆಲಸ ಒದಗಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದು, ಖರೀದಿಯನ್ನು ನೇಕಾರರು ಉತ್ಪಾದಿಸದೇ ಇರುವು ನಮೂನೆಗಳಿಗೆ ಮತ್ತು ಅಥವಾ ಸ್ವಂತ ಉತ್ಪಾದನೆಯಿಂದ ಬೇಡಿಕೆಯನ್ನು ನೀಗಿಸಿಕೊಳ್ಳಲು ಸಾಧ್ಯವಾಗದಿರುವಷ್ಟರ ಮಟ್ಟಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ಈ) ಸಹಕಾರಿ ವಲಯದಿಂದ ಹೊರಗುಳಿದ ನೇಕಾರರನ್ನು ಸಂಘಟಿಸಿ, ಅವರಿಗೆ ನಿರಂತರ ಉದ್ಯೋಗ ಒದಗಿಸುವುದು ನಿಗಮದ ಉದ್ದೇಶವಾಗಿದ್ದು, ಈ ಉದ್ದೇಶವನ್ನು ನಿಗಮದ ಮುಖಾಂತರ ಈಡೇರಿಸಿಕೊಳ್ಳಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡಿದೆ.

ಕುಂದಾಪುರ ತಾಲ್ಲೂಕಿನಲ್ಲಿ ಕೆಂಪು ಕಲ್ಲು ಕಡಿಯುವ ಪರವಾನಗಿ

2965 - ಶ್ರೀ ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಸಂಚಾರಿನಲ್ಲಿ ಮತ್ತು ಕುಂದಾಪುರ ತಾಲ್ಲೂಕಿನ ಹೊಸ ಅಂಗಡಿಯಲ್ಲಿ ಕೆಂಪುಕಲ್ಲು ಕಡಿಯಲು ಪರವಾನಗಿ ಪಡೆದ ಗುತ್ತಿಗೆದಾರರೆಷ್ಟು (ಸಂಪೂರ್ಣ ವಿಳಾಸ ತಿಳಿಸುವುದು)?

ಆ) ಗುತ್ತಿಗೆದಾರರು ಪಡೆದ ಪರವಾನಿಗೆಯ ವಿಸ್ತೀರ್ಣವೆಷ್ಟು, ಮತ್ತು ಸರ್ವೆನಂಬರುಗಳು ಯಾವುವು?

ಇ) ಅಕ್ರಮ ಕೆಂಪು ಕಲ್ಲು ಗುತ್ತಿಗೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಸಿಬ್ಬಂದಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) 1. ಉಡುಪಿ ತಾಲ್ಲೂಕಿನ ನಂಜಾರು ಗ್ರಾಮದಲ್ಲಿ ಕೆಂಪು ಕಲ್ಲು ಕಡಿಯಲು ಕಲ್ಲು ಗಣಿ ಗುತ್ತಿಗೆ ಪಡೆದವರ ಸಂಖ್ಯೆ - 5

2. ಕುಂದಾಪುರ ತಾಲ್ಲೂಕಿನ ಹೊಸ ಅಂಗಡಿ (ಎಡಮೊಗ್ಗೆ) ಗ್ರಾಮದಲ್ಲಿ ಕೆಂಪು ಕಲ್ಲು ಕಡಿಯಲ್ಲಿ ಕಲ್ಲು ಗಣಿ ಗುತ್ತಿಗೆ ಪಡೆದವರ ಸಂಖ್ಯೆ - 12 (ವಿಳಾಸಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.

ಇ) ಇಲ್ಲ.